ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 1- 5
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಲಿಂಗವ್ಯವಸ್ಥೆಯ ಸಾಮಾಜಿಕ ನಿರ್ಮಾಣದಲ್ಲಿ ಲಿಂಗಪೂರ್ವಗ್ರಹಗಳ ಪಾತ್ರ

**ಡಾ. ಸರ್ವಮಂಗಳ***

*ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಜೆಎಲ್‌ಬಿ ರಸ್ತೆ, ಮೈಸೂರು

***Abstract:***

*ಸಮಾಜದಲ್ಲಿ ಲಿಂಗ ವ್ಯವಸ್ಥೆಯ ಬೆಳವಣಿಗೆ, ಸ್ತ್ರೀಯರು ಪುರುಷರಿಗಿಂತಲೂ ಕೀಳು ಎಂಬ ಭಾವನೆಗಳು ಮೂಡಿ ಲಿಂಗ ಅಸಮಾನತೆ ಸೃಷ್ಟಿಯಾಗಲು ಅನೇಕ ಅಂಶಗಳು ಕಾರಣವಾಗಿದ್ದು, ಅವುಗಳಲ್ಲಿ ಪ್ರಮುಖವಾಗಿ ಲಿಂಗಪೂರ್ವಗ್ರಹವು ಕೂಡ ಒಂದಾಗಿದೆ. ಲಿಂಗಪೂರ್ವಗ್ರಹಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಯುವ ಹಾಗೂ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಲಿಂಗಪೂರ್ವಗ್ರಹದ ಭಾವನೆ ಹೇಗೆ ಸಮಾಜದಲ್ಲಿ ಲಿಂಗ ತಾರತಮ್ಯ ಬೆಳೆಯಲು ಕಾರಣವಾಗಿದೆ ಎಂಬುದನ್ನು ತಿಳಿಯುವ ಉದ್ದೇಶದಿಂದ ಮಾಧ್ಯಮಿಕ ಮಾಹಿತಿಯ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.*

**Keywords:** *ಲಿಂಗ ಪೂರ್ವಗ್ರಹ, ಲಿಂಗ ವ್ಯವಸ್ಥೆ, ಸಮಾಜ ನಿರ್ಮಾಣ, ಲಿಂಗ ಅಸಮಾನತೆ.*

## ಪೀಠಿಕೆ

ಸಮಾಜದಲ್ಲಿ ಆಳವಾಗಿ ಬೇರೂರಿರುವ ಲಿಂಗಪೂರ್ವಗ್ರಹದ ಮನೋಭಾವನೆಗಳನ್ನು ಬದಲಾಯಿಸಿ, ಮಹಿಳೆಯರ ಬಗ್ಗೆ ವಿಶಾಲ ಮನೋಭಾವನೆಯನ್ನು ಬೆಳೆಸುವ ಮೂಲಕ ಸ್ತ್ರೀ–ಪುರುಷರ ನಡುವೆ ಲಿಂಗಸಮಾನತೆ ತರುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ. ಸ್ತ್ರೀಯರ ಶಕ್ತಿ, ಸಮಾಜದಲ್ಲಿ ಪಾತ್ರ, ಸ್ತ್ರೀಯರಿಗಿರುವ ಸಾಮರ್ಥ್ಯ ಕುರಿತು ಸಮಾಜವು ನಕರಾತ್ಮಕ ದೃಷ್ಟಿಕೋನವನ್ನು ತಾಳಿದೆ. ಈ ರೀತಿಯ ನಕರಾತ್ಮಕ ದೃಷ್ಟಿಕೋನವೇ ಲಿಂಗಪೂರ್ವಗ್ರಹ. ಪೂರ್ವ ನಿರ್ಧಾರಿತ ದೃಷ್ಟಿಕೋನದಲ್ಲಿ ಮಹಿಳೆ ಹಾಗೂ ಅವಳಿಗಿರುವ ಸಾಮರ್ಥ್ಯವನ್ನು ನಕರಾತ್ಮಕವಾಗಿ ನೋಡುವ ಸಮಾಜದ ರೀತಿ ಬದಲಾಗಬೇಕಾಗಿರುವುದು ಅಗತ್ಯವಾಗಿದೆ. ಸ್ತ್ರೀಯರ ಸ್ಥಾನಮಾನದ ಬದಲಾವಣೆ, ಸುಧಾರಣೆ, ಪ್ರಗತಿ ಮತ್ತು ಲಿಂಗಪೂರ್ವಗ್ರಹ ನಿರ್ಮೂಲನೆ ಅನಿವಾರ್ಯವಾಗಿರುವುದರಿಂದ ಲಿಂಗಪೂರ್ವಗ್ರಹ ಪರಿಕಲ್ಪನೆಯ ಅಧ್ಯಯನವೂ ಲಿಂಗ ವ್ಯವಸ್ಥೆಯ ಮೂಲಭೂತ ಪರಿಕಲ್ಪನೆಗಳ ಅಧ್ಯಯನಗಳಲ್ಲಿ ಪ್ರಮುಖವೆನಿಸಿದೆ.

## ಸಾಹಿತ್ಯ ಅವಲೋಕನ

ಇಂದಿರಾ ಆರ್ (2002)ರವರು ತಮ್ಮ ಅಧ್ಯಯನದಲ್ಲಿ ಹೆಣ್ಣಿನ ಸಾಮರ್ಥ್ಯ ಏನೇ ಇರಲಿ ಅವಳ ವ್ಯಕ್ತಿತ್ವವನ್ನು ಪೂರ್ವಗ್ರಹ ಪೀಡಿತ ದೃಷ್ಟಿಕೋನದಿಂದ ನೋಡುವುದು, ಯಶಸ್ವಿ ಮಹಿಳೆಯರನ್ನು ಕುಟುಂಬದ ವಿರೋಧಿಗಳು, ಸಮಾಜದ ಕಟ್ಟು–ಕಟ್ಟಲೆಗಳನ್ನು ಮುರಿದವರು ಎಂದು ಟೀಕಿಸುವುದು,

***Please cite this article as:*** ಸರ್ವಮಂಗಳ (2023). ಲಿಂಗವ್ಯವಸ್ಥೆಯ ಸಾಮಾಜಿಕ ನಿರ್ಮಾಣದಲ್ಲಿ ಲಿಂಗಪೂರ್ವಗ್ರಹಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(6), 1–5.

ಹೆಣ್ಣಿನ ಮೊದಲ ಕರ್ತವ್ಯ ಪತ್ನಿ ಮತ್ತು ತಾಯಿ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವುದು ಎಂಬ ಪ್ರತಿಕ್ರಿಯೆಗಳು ವ್ಯಕ್ತವಾಗುವುದು ಸರ್ವೇಸಾಮಾನ್ಯ. ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳು ಉಂಟಾಗುವವರೆಗೂ ಸಮಾಜದಲ್ಲಿ ಮಹಿಳೆಯರ ಪರಿಸ್ಥಿತಿ ಗಮನಾರ್ಹವಾಗಿ ಬದಲಾಗದು. ಸಾಮಾಜಿಕ ವ್ಯವಸ್ಥೆ ಮತ್ತು ಆ ವ್ಯವಸ್ಥೆ ನಿರ್ಮಾಣ ಮಾಡಿರುವ ಸಂಸ್ಕೃತಿ ಮಹಿಳೆಯರ ಜೀವನವನ್ನು ಪ್ರಭಾವಿಸುವ ಪ್ರಮುಖ ವ್ಯವಸ್ಥೆಗಳಾಗಿವೆ ಎಂದಿದ್ದಾರೆ.

ಪ್ರೀತಿ ಶುಭಚಂದ್ರ (2002) ರವರು ತಮ್ಮ ಅಧ್ಯಯನದಲ್ಲಿ ಮಕ್ಕಳನ್ನು ಹೆತ್ತು ಪಾಲನೆ ಮಾಡುವುದು ಸಾಮಾಜಿಕವಾಗಿ ಹೆಚ್ಚಿನ ಬೆಲೆಯುಳ್ಳದ್ದು. ಗಂಡಸು ಹೊರಗೆ ದುಡಿದು ತನ್ನ ಜೀವನದಲ್ಲಿ ಯಶಸ್ಸನ್ನು ಮತ್ತು ಕೌಟುಂಬಿಕ ಬದ್ಧತೆಯನ್ನು ಪಡೆಯುತ್ತಾನೆ. ಮಹಿಳೆ ತಾಯಿಯಾಗಿ, ಗೃಹಕೃತ್ಯಗಳಲ್ಲಿ ತೊಡಗುವುದರ ಮೂಲಕ ತನ್ನ ಕೌಟುಂಬಿಕ ಬದ್ಧತೆಯನ್ನು ನಿಭಾಯಿಸಬೇಕೆಂದು ಸಂಸ್ಕೃತಿ ನಿರೀಕ್ಷಿಸುತ್ತದೆ ಎಂದಿದ್ದಾರೆ.

ಶಂಕರ್‌ರಾವ್ ಚ.ನ (2012) ತಮ್ಮ ಕೃತಿಯಲ್ಲಿ ಸ್ತ್ರೀಯರ ಕುರಿತಾದ ಲಿಂಗಪೂರ್ವಗ್ರಹಗಳ ಬಳಕೆಯಿಂದ ಅವರ ಸ್ವ–ಪ್ರತಿಭೆಗೆ ಬಹಳಷ್ಟು ಧಕ್ಕೆಯಾಗಿದೆ. ಅಂದರೆ ಸ್ತ್ರೀಯರನ್ನು ಕುರಿತಾಗಿ ಅವರು ಬುದ್ಧಿವಂತರಲ್ಲ, ಹೆಚ್ಚು ಭಾವುಕರು, ವಿಚಾರಶೀಲತೆ ಇಲ್ಲದವರು, ಸಂಕುಚಿತ ಬುದ್ಧಿ ಉಳ್ಳವರು, ಎದೆಗಾರಿಕೆ ಇಲ್ಲದವರು, ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವಿಲ್ಲದವರು ಎಂಬ ಸಾಮಾಜಿಕ ಲಿಂಗ ಪಡಿಯಚ್ಚುಗಳು ಮಹಿಳೆಯರ ವ್ಯಕ್ತಿತ್ವದ ಬೆಳವಣಿಗೆಗೆ ಬಹಳ ಹಾನಿಯಾಗಿದೆ. ಈ ಸಾಮಾಜಿಕ ಲಿಂಗ ಪಡಿಯಚ್ಚುಗಳು ಮಹಿಳೆಯರ ಕುರಿತಾದ ಪೂರ್ವಗ್ರಹ ಭಾವನೆಗಳ ಬೆಳವಣಿಗೆಗೆ ಕಾರಣವಾಗಿದ್ದು ಆ ಮೂಲಕ ಲಿಂಗ ತಾರತಮ್ಯ ಹಾಗೂ ಸ್ತ್ರೀಯರ ಅಪಮೌಲ್ಯ ಮತ್ತು ಅವಹೇಳನಕ್ಕೆ ಕಾರಣವಾಗಿದೆ ಎಂದಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಲಿಂಗಪೂರ್ವಗ್ರಹದ ಬೆಳವಣಿಗೆಗೆ ಕಾರಣಗಳನ್ನು ತಿಳಿಯುವುದು
- ಲಿಂಗವ್ಯವಸ್ಥೆಯ ಸಾಮಾಜಿಕ ನಿರ್ಮಾಣದಲ್ಲಿ ಲಿಂಗ ಪೂರ್ವಗ್ರಹದ ಪಾತ್ರವನ್ನು ತಿಳಿಯುವುದು

**ಲಿಂಗ ಪೂರ್ವಗ್ರಹ ಅಧ್ಯಯನದ ಮಹತ್ವ**

- ಲಿಂಗಪೂರ್ವಗ್ರಹಗಳ ಅಧ್ಯಯನದಿಂದ ಪುರುಷರಿಗೆ ಹೋಲಿಸಿದಾಗ ಸ್ತ್ರೀಯರ ಸಾಮಾಜಿಕ ಅಂತಸ್ತು ಹೇಗಿದೆ ಎಂಬುದನ್ನು ತಿಳಿಯಲು ಮತ್ತು ಅದನ್ನು ಸಕಾರಾತ್ಮಕವಾಗಿ ಬದಲಿಸಲು ಸಹಾಯಕವಾಗುತ್ತದೆ.
- ಸಮಾಜದ ಎಲ್ಲಾ ಕ್ಷೇತ್ರ ಮತ್ತು ಆಯಾಮಗಳಲ್ಲೂ ಸ್ತ್ರೀ ಪುರುಷರ ಬಗ್ಗೆ ಸಮಾಜ ಹೊಂದಿರುವ ಧೋರಣೆಗಳು ಏನೆಂಬುದನ್ನು ತಿಳಿದು ಸಕರಾತ್ಮಕವಾಗಿ ಬದಲಿಸಲು ಸಹಕಾರಿಯಾಗುತ್ತದೆ.
- ಸ್ತ್ರೀಯರು ಸಮಾಜದಲ್ಲಿ ಹೇಗೆ ಅವಕಾಶ ಮತ್ತು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂಬುದನ್ನು ತಿಳಿದು ಅವರಿಗೆ ಸೂಕ್ತ ಸ್ಥಾನಮಾನ ಅವಕಾಶಗಳನ್ನು ಕಲ್ಪಿಸಲು ಸಹಕಾರಿಯಾಗುತ್ತದೆ.

- ಸ್ತ್ರೀಯರು ಸಮಾಜದಲ್ಲಿ ಹೇಗೆ ಅನ್ಯಾಯ, ಅಸಮಾನತೆಗೆ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂಬುದನ್ನು ವಿಶ್ಲೇಷಿಸಲು ಮತ್ತು ಮಹಿಳೆಯರಿಗೆ ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಕಲ್ಪಿಸಲು ಸಹಕಾರಿಯಾಗುತ್ತದೆ.
- ಸ್ತ್ರೀಯರು ಮತ್ತು ಪುರುಷ ಸಮೂಹವನ್ನು ಲಿಂಗವ್ಯವಸ್ಥೆ ಹೇಗೆ ವಿಭಿನ್ನವಾಗಿ ಬಿಂಬಿಸಿದೆ ಎಂಬುದನ್ನು ತಿಳಿದು ಬದಲಿಸಲು, ಸಮಾಜವನ್ನು ಪ್ರಗತಿಯತ್ತ ಕೊಂಡೊಯ್ಯಲು ಸಹಕಾರಿಯಾಗುತ್ತದೆ.
- ಲಿಂಗಪೂರ್ವಗ್ರಹದ ಅಧ್ಯಯನವು ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯುವ ಮತ್ತು ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ/ ಉಪಯುಕ್ತಕರವಾಗಿದೆ ಎನ್ನಬಹುದು.

**ಅಧ್ಯಯನದ ವಿಧಾನ**

ಪ್ರಸ್ತುತ ಅಧ್ಯಯನವನ್ನು ಸಂಪೂರ್ಣವಾಗಿ ಮಾಧ್ಯಮಿಕ ಮಾಹಿತಿಯ ವಿಧಾನವನ್ನು ಆಧಾರಿಸಿ ಕೈಗೊಳ್ಳಲಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮಾಧ್ಯಮಿಕ ಮಾಹಿತಿಯ ಮೂಲಗಳಾದ ಗ್ರಂಥಗಳು, ನಿಯತಕಾಲಿಕೆಗಳು, ಸುದ್ದಿ ಪತ್ರಿಕೆಗಳು, ಸಂಶೋಧನಾ ಲೇಖನಗಳು ಮತ್ತು ಪ್ರಮುಖ ಅಂತರ್ಜಾಲದ ಮೂಲಗಳಿಂದ ಸಂಗ್ರಹಿಸಲಾಗಿದೆ.

**ವಿಷಯ ಮಂಡನೆ**

ಸಾಮಾನ್ಯವಾಗಿ ಪೂರ್ವಗ್ರಹ ಎಂದರೆ 'ಯಾವುದೇ ವಸ್ತು, ವ್ಯಕ್ತಿ, ವಿಚಾರದ ಬಗೆಗಿನ ಪೂರ್ವ ನಿರ್ಧರಿತ/ನಿರ್ಧಾರಿತ ಭಾವನೆ ಅಥವಾ ಅಭಿಪ್ರಾಯ ಎಂದರ್ಥ' ಈ ನಿಟ್ಟಿನಲ್ಲಿ ಲಿಂಗ ಪೂರ್ವಗ್ರಹ ಎಂದರೆ ಸಮಾಜ ಸ್ತ್ರೀ ಮತ್ತು ಪುರುಷರ ಬಗ್ಗೆ ಅಂದರೆ ಅವರ ಪಾತ್ರ, ಗುಣಸ್ವಭಾವ, ನಡವಳಿಕೆ, ವ್ಯಕ್ತಿತ್ವ, ಅಂತಸ್ತು, ನಿರ್ವಹಿಸಬೇಕಾದ ಕಾರ್ಯಗಳು, ಜವಾಬ್ದಾರಿಗಳು ಇತ್ಯಾದಿಗಳ ಬಗ್ಗೆ ತಾಳಿರುವ ಪೂರ್ವ ನಿರ್ಧರಿತ ಮನೋಭಾವನೆಗಳು, ನಿಲುವುಗಳು, ಅಭಿಪ್ರಾಯಗಳೇ ಲಿಂಗ ಪೂರ್ವಗ್ರಹಗಳಾಗಿವೆ. ಅಂದರೆ ಸಮಾಜದಲ್ಲಿ ಸ್ತ್ರೀಯರು ಮತ್ತು ಪುರುಷರು ಮೈಗೂಡಿಸಿಕೊಳ್ಳಬೇಕಾಗಿರುವ ಗುಣಗಳ ಬಗ್ಗೆ, ನಡೆದುಕೊಳ್ಳಬೇಕಾಗಿರುವ ರೀತಿಯ ಬಗ್ಗೆ, ನಿರ್ವಹಿಸಬೇಕಾಗಿರುವ ಜವಾಬ್ದಾರಿಗಳ ಬಗ್ಗೆ ಜನರು ಈಗಾಗಲೇ ತಾಳಿರುವ ನಿಲುವುಗಳೇ ಲಿಂಗ ಪೂರ್ವಗ್ರಹಗಳಾಗಿವೆ. ಒಟ್ಟಾರೆ ಸ್ತ್ರೀತನ ಮತ್ತು ಪುರುಷತನದ ಬಗ್ಗೆ ಸಮಾಜದ ಜನರು ಹೊಂದಿರಬಹುದಾದ ಪೂರ್ವ ನಿರ್ಧರಿತ ಮನೋಭಾವನೆಗಳೇ ಲಿಂಗ ಪೂರ್ವಗ್ರಹಗಳಾಗಿವೆ. ಹಾಗಾಗಿ ಸ್ತ್ರೀಯರು ಮತ್ತು ಪುರುಷರು ನಡೆದುಕೊಳ್ಳಬೇಕಾಗಿರುವ ರೀತಿ ಮತ್ತು ಮೈಗೂಡಿಸಿಕೊಳ್ಳಬೇಕಾಗಿರುವ ವ್ಯಕ್ತಿತ್ವದ ಬಗ್ಗೆ ಸಮಾಜವು ತಾಳಿರುವ ಪೂರ್ವನಿರ್ಧರಿತ ಮನೋಭಾವನೆಯೇ ಲಿಂಗಪೂರ್ವಗ್ರಹ.

ಸ್ತ್ರೀ ಮತ್ತು ಪುರುಷರ ಪಾತ್ರಗಳನ್ನು ಕುರಿತಾದ ಮಾತುಗಳು, ಗಾದೆಗಳು ಮತ್ತು ನಾಣ್ಣುಡಿಗಳು, ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ, ಕೀರ್ತಿಗೊಬ್ಬ ಮಗ ಆರತಿಗೊಬ್ಬ ಮಗಳು, ಗಂಡು ಶೌರ್ಯ–ಸಾಮರ್ಥ್ಯದ ಪ್ರತೀಕ, ಹೆಣ್ಣು ಸೌಂದರ್ಯದ ಪ್ರತೀಕ ಇತ್ಯಾದಿ, ಸ್ತ್ರೀಯರು ಚಂಚಲೆಯರು, ಆಮಿಷಕ್ಕೆ ಒಳಗಾಗುವವರು ಎಂಬ ಭಾವನೆ, ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ, ನಿಯಂತ್ರಣದಲ್ಲಿರಬೇಕು ಎಂಬ ಭಾವನೆ, ಕೆಲಸದ ಹಂಚಿಕೆಯಲ್ಲಿ ಮತ್ತು ವೇತನ ನೀಡಿಕೆಯಲ್ಲಿ ತಾರತಮ್ಯ, ಸ್ತ್ರೀಯರು ಮಹತ್ತರ ನಿರ್ಣಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನರ್ಹರು, ಸ್ತ್ರೀಯರ

ಸಲಹೆ ಸೂಚನೆ ಅಭಿಪ್ರಾಯಗಳ ನಿರ್ಲಕ್ಷ್ಯ, ಸ್ತ್ರೀಯರ ಬಗೆಗಿನ ಸಾಮಾಜಿಕ, ಸಾಂಸ್ಕೃತಿಕ ನಕರಾತ್ಮಕ ದೃಷ್ಟಿಕೋನ, ಶೀಲಾ ಚಾರಿತ್ಯ, ವ್ಯಕ್ತಿತ್ವ, ಮಾನ–ಮರ್ಯಾದೆ ಹೆಣ್ಣಿಗೆ ಬಹಳ ಮುಖ್ಯವಾದದ್ದು ಎಂಬ ಭಾವನೆ, ಪುರುಷಂ ಉದ್ಯೋಗ ಲಕ್ಷಣಂ, ಗಂಡು ಸಂತಾನದಿಂದ ಮೋಕ್ಷ ಸದ್ಗತಿ ದೊರೆಯುತ್ತದೆ, ಗಂಡು ಮಕ್ಕಳು ವಂಶೋದ್ಧಾರಕರು ಎಂಬ ಭಾವನೆ ಇತ್ಯಾದಿ ಅಂಶಗಳು ಲಿಂಗಪೂರ್ವಗ್ರಹಕ್ಕೆ ಉದಾಹರಣೆಗಳಾಗಿವೆ.

**ಲಿಂಗ ಪೂರ್ವಗ್ರಹದ ಲಕ್ಷಣಗಳು**

ಲಿಂಗ ಪೂರ್ವ ಗ್ರಹವುವ್ಯಕ್ತಿಯ ಸ್ಥಾನಮಾನದ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುವಂತಹವುಗಳಾಗಿರುತ್ತವೆ, ಅಲ್ಲದೇ ಲಿಂಗ ಪೂರ್ವಗ್ರಹಗಳನ್ನು ಪ್ರಜ್ಞಾಪೂರ್ವಕವಾಗಿ ಅನುಸರಿಸುವುದರ ಮುಖೇನ ಲಿಂಗತಾರತಮ್ಯ ಮತ್ತು ಲಿಂಗಾಧಾರಿತ ಶ್ರಮವಿಭಜನೆಗೆ ಪೂರಕವಾಗಿರುತ್ತವೆ. ಲಿಂಗ ಪೂರ್ವಗ್ರಹ ಸಮಾಜದಲ್ಲಿ ಆಳವಾಗಿ ಬೇರೂರಿರುವ ನಂಬಿಕೆಗಳಾಗಿದ್ದು, ಸಮಾಜದ ನಿಯಮಗಳು, ಕಾನೂನುಗಳೊಂದಿಗೆ ಪರಸ್ಪರ ಸಂಬಂಧ ಹೊಂದಿರುತ್ತವೆ. ಲಿಂಗ ಪೂರ್ವಗ್ರಹಗಳನ್ನು ಒತ್ತಾಯ ಪೂರ್ವಕವಾಗಿ ಹೇರಲಾಗುತ್ತದೆ. ಲಿಂಗಪೂರ್ವಗ್ರಹಗಳು ಪುರುಷರ ದೃಷ್ಟಿಕೋನಗಳನ್ನು ಆಧರಿಸಿ ಸ್ಥಾಪನೆಯಾಗಿರುತ್ತವೆ. ಅಂದರೆ ಪುರುಷರ ಮನೋಭಾವನೆ ಮತ್ತು ಲಿಂಗಪೂರ್ವಗ್ರಹಗಳ ನಡುವೆ ಪರಸ್ಪರ ಸಂಬಂಧವಿರುತ್ತದೆ. ಸಾಮಾನ್ಯವಾಗಿ ಲಿಂಗಪೂರ್ವಗ್ರಹಗಳು ಪುರುಷರ ಬಗ್ಗೆ ಸಕರಾತ್ಮಕ ದೃಷ್ಟಿಕೋನ, ಸ್ತ್ರೀಯರ ಬಗ್ಗೆ ನಕರಾತ್ಮಕ ದೃಷ್ಟಿಕೋನವನ್ನು ಬಿಂಬಿಸುತ್ತವೆ ಮತ್ತು ಬೆಳೆಸುತ್ತವೆ. ಸ್ತ್ರೀ ಮತ್ತು ಪುರುಷರ ಬಗ್ಗೆ ವಿಭಿನ್ನ ದೃಷ್ಟಿಕೋನವನ್ನು ಪ್ರತಿಪಾದಿಸುತ್ತವೆ.

**ಲಿಂಗಪೂರ್ವಗ್ರಹಕ್ಕೆ ಒಳಗಾಗಿರುವ ಸಮಾಜದ ಮುಖ್ಯ ಕ್ಷೇತ್ರಗಳು**

ಲಿಂಗ ಪೂರ್ವಗ್ರಹಕ್ಕೆ ಒಳಗಾಗಿರುವ ಕ್ಷೇತ್ರಗಳಲ್ಲಿ ವಿವಾಹ ಮತ್ತು ಕುಟುಂಬ, ಶಿಕ್ಷಣ, ಸಾಂಪ್ರದಾಯಿಕ ಸಾಂಸ್ಕೃತಿಕ ಆಚರಣೆಗಳು, ಜನರ ಮನೋಭಾವನೆಗಳು ಮತ್ತು ನಂಬಿಕೆಗಳು, ಆರ್ಥಿಕ ಕ್ಷೇತ್ರ ಅಥವಾ ಆರ್ಥಿಕತೆ, ಉದ್ಯೋಗ ಕ್ಷೇತ್ರ, ರಾಜಕೀಯ ಕ್ಷೇತ್ರ, ಸಮೂಹ ಮಾಧ್ಯಮ, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ, ಇತ್ಯಾದಿ ಪ್ರಮುಖವಾದವುಗಳಾಗಿವೆ.

**ಲಿಂಗಪೂರ್ವಗ್ರಹ ಬೆಳವಣಿಗೆಗೆ ಕಾರಣವಾದ ಅಂಶಗಳು**

ಸಮಾಜದಲ್ಲಿ ಲಿಂಗ ಅಸಮಾನತೆಗೆ ಕಾರಣವಾಗಿರುವ ಲಿಂಗಪೂರ್ವ ಬೆಳವಣಿಗೆಗಳಿಗೆ ಹಲವಾರು ಅಂಶಗಳು ಕಾರಣವಾಗಿವೆ. ಅವುಳೆಂದರೆ ಕುಟುಂಬದ ಸಾಮಾಜೀಕರಣ ಕಾರ್ಯ, ಶಿಕ್ಷಣ (ಶಾಲಾ ಪಠ್ಯಕ್ರಮ, ಶಿಕ್ಷಕರ ಪಾತ್ರ), ಜನರ ಮನೋಭಾವನೆ, ಮನಸ್ಥಿತಿ, ನಂಬಿಕೆಗಳು, ಸಮೂಹ ಮಾಧ್ಯಮಗಳು, ಸಂಸ್ಕೃತಿ, ಸಾಂಸ್ಕೃತಿಕ ಆಚರಣೆ, ಮೂಢನಂಬಿಕೆಗಳು ಪ್ರಮುಖವಾದವುಗಳಾಗಿವೆ.

**ಲಿಂಗಪೂರ್ವಗ್ರಹದ ಪರಿಣಾಮಗಳು**

ಲಿಂಗಪೂರ್ವಗ್ರಹವು ಸಮಾಜದ ಮೇಲೆ ಅನೇಕ ರೀತಿಯ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಲಿಂಗ ತಾರತಮ್ಯ, ಲಿಂಗ ಅಸಮಾನತೆ, ಲಿಂಗ ವ್ಯವಸ್ಥೆಯ ಬೆಳವಣಿಗೆ, ಸ್ತ್ರೀಯರ ಪಾತ್ರ, ಅಂತಸ್ತು, ಶಕ್ತಿ–ಸಾಮರ್ಥ್ಯದ ಬಗ್ಗೆ ನಕರಾತ್ಮಕ ಧೋರಣೆಯನ್ನು ಬೆಳೆಸುತ್ತದೆ. ಲಿಂಗತಾರತಮ್ಯದಿಂದ ಕೂಡಿದ ಸಾಮಾಜೀಕರಣದ ಬೆಳವಣಿಗೆ, ಸ್ತ್ರೀಯರ ಕೌಟುಂಬಿಕ ಮತ್ತು ವೈವಾಹಿಕ ದೌರ್ಜನ್ಯಕ್ಕೆ ಅವಕಾಶ, ಸ್ತ್ರೀ–ಸಂಬಂಧಿತ ಶೋಷಣೆ ಮತ್ತು ದೌರ್ಜನ್ಯಗಳ ಹೆಚ್ಚಳ. ಉದಾ: ವರದಕ್ಷಿಣೆ, ಬಾಲ್ಯವಿವಾಹ, ಸತಿಪದ್ಧತಿ, ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶುಹತ್ಯೆ, ಮರ್ಯಾದಹತ್ಯೆ, ವಿಧವಾ ಪುನರ್ ವಿವಾಹದ ಮೇಲೆ ನಿಷೇಧ,

ವಿವಾಹ ವಿಚ್ಛೇಧನೆಯ ನಿರಾಕರಣೆ, ಉನ್ನತ ಶಿಕ್ಷಣ ಮತ್ತು ಉದ್ಯೋಗವಕಾಶಗಳ ಮೇಲೆ ನಿರ್ಬಂಧ, ಇತ್ಯಾದಿ. ಪಿತ್ರಾರ್ಜಿತ ಆಸ್ತಿ ಹಕ್ಕಿನ ನಿರಾಕರಣೆ ಮೂಲಕ ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ತೊಡಕು, ಹೆಣ್ಣು ಮಕ್ಕಳ ಶಿಕ್ಷಣಕ್ಕಿಂತ ವಿವಾಹಕ್ಕೆ, ತಾಯ್ತನಕ್ಕೆ ಆಧ್ಯತೆ ನೀಡಿ ಉತ್ತಮ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಂದ ವಂಚನೆ, ಕುಟುಂಬ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತಮ ಸ್ಥಾನಮಾನ, ಜವಾಬ್ದಾರಿಗಳಿಂದ ಮಹಿಳೆಯರಿಗೆ ವಂಚನೆ, ಸ್ತ್ರೀ ಮತ್ತು ಪುರುಷರ ಪಾತ್ರ, ಸ್ವಭಾವ ಕುರಿತಂತೆ ಸಮಾಜದಲ್ಲಿ ವಿಭಿನ್ನ ದೃಷ್ಟಿಕೋನದ ಬೆಳವಣಿಗೆ, ಸ್ತ್ರೀಯರ ನಿರ್ಧಾರ ನಿರ್ಣಯಗಳ ನಿರ್ಲಕ್ಷ್ಯ, ಸ್ತ್ರೀಯರು ನಿರ್ವಹಿಸುವ ಮನೆ ಕೆಲಸಕ್ಕೆ ಗೌರವ ಮನ್ನಣೆ ನಿರಾಕರಣೆ, ಸ್ತ್ರೀಯರು ಅಬಲೆಯರು, ಅವಲಂಬಿತರು, ಸ್ವಾತಂತ್ರ್ಯಕ್ಕೆ ಅನರ್ಹರು ಎಂಬ ಇತ್ಯಾದಿ ಸ್ತ್ರೀ ಸಂಬಂಧಿತ ನಕರಾತ್ಮಕ ಮನೋಭಾವನೆಗಳ ಬೆಳವಣಿಗೆಗೆ ಲಿಂಗ ಪೂರ್ವಗ್ರಹವು ಕಾರಣವಾಗಿದೆ.

**ಲಿಂಗಪೂರ್ವಗ್ರಹ ನಿವಾರಣೆಗೆ ಸಲಹೆಗಳು**

ಅಧ್ಯಯನದ ಆಧಾರದ ಮೇಲೆ ಲಿಂಗಪೂರ್ವಗ್ರಹದ ನಿವಾರಣೆಗೆ ಹಲವಾರು ಸಲಹೆಗಳನ್ನು ನೀಡಲಾಗಿದೆ. ಅವುಗಳೆಂದರೆ ಶಿಕ್ಷಣ ನೀಡಿಕೆ, ವೈಜ್ಞಾನಿಕ ಮನೋಭಾವನೆಯ ಬೆಳವಣಿಗೆ, ಕಾನೂನು ಮತ್ತು ಸಂವಿಧಾನಾತ್ಮಕ ಕ್ರಮಗಳ ಜಾರಿ, ಸಮೂಹ ಮಾಧ್ಯಮದ ಪಾತ್ರ, ಸಂಘ ಸಂಸ್ಥೆಗಳು ಮತ್ತು ಮಹಿಳಾ ಚಳುವಳಿಗಳ ಜವಾಬ್ದಾರಿಯುತ ಪಾತ್ರ ನಿರ್ವಹಣೆ, ಇತ್ಯಾದಿ.

**ಉಪಸಂಹಾರ**

ಲಿಂಗ ಪೂರ್ವಗ್ರಹವು ಲಿಂಗವ್ಯವಸ್ಥೆಯ ಅಧ್ಯಯನದ ಮೂಲಭೂತ ಪರಿಕಲ್ಪನೆಗಳಲ್ಲಿ ಒಂದಾಗಿದೆ. ಸಮಾಜದಲ್ಲಿ ಕಂಡು ಬರುತ್ತಿರುವ ಲಿಂಗ ತಾರತಮ್ಯದ ಸೃಷ್ಟಿಗೆ ಮತ್ತು ಬೆಳವಣಿಗೆಗೆ ಪ್ರಮುಖ ಕಾರಣಾಂಶಗಳಲ್ಲಿ ಒಂದಾಗಿದೆ. ಹಾಗಾಗಿ ಸಮಾಜದಲ್ಲಿ ಲಿಂಗವ್ಯವಸ್ಥೆ ಸ್ತ್ರೀ ಮತ್ತು ಪುರುಷರ ನಡುವೆ ಸೃಷ್ಟಿಸಿರುವ ಲಿಂಗ ತಾರತಮ್ಯವನ್ನು ನಿವಾರಿಸಿ ಲಿಂಗಸಮಾನತೆ ಬೆಳೆಸುವ ನಿಟ್ಟಿನಲ್ಲಿ ಲಿಂಗಪೂರ್ವಗ್ರಹ ಭಾವನೆಗಳನ್ನು ನಿವಾರಿಸಿ ಜನರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವುದು ಅಗತ್ಯವಾಗಿದೆ. ಹಾಗಾಗಿ ಸಮಾಜದಲ್ಲಿ ಮಹಿಳೆಯರ ಬಗ್ಗೆ ನಕರಾತ್ಮಕ ಮನೋಭಾವನೆಯನ್ನು ಬೆಳೆಸುತ್ತಿರುವ ಲಿಂಗಪೂರ್ವಗ್ರಹ ಮನೋಭಾವನೆಯನ್ನು, ಸಮಾಜದಲ್ಲಿರುವ ಲಿಂಗ ತಾರತಮ್ಯವನ್ನು, ಮಹಿಳಾ ಸಂಬಂಧಿತ ಸಮಸ್ಯೆಗಳನ್ನು ನಿವಾರಿಸಿದಾಗ ಮಾತ್ರ ಲಿಂಗಸಮಾನತೆಯೊಂದಿಗೆ ಮಹಿಳೆಯರ ಪ್ರಗತಿ ಮತ್ತು ಸಮಾಜದ ಪ್ರಗತಿ ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಹಾಲತಿ ಸೋಮಶೇಖರ್. (2008). *ಸ್ತ್ರೀಪರ ಕಾನೂನುಗಳು ಮತ್ತು ಸಂಘಟನೆಗಳು.* ವಿಸ್ಮಯ ಪ್ರಕಾಶನ.
- ಇಂದಿರಾ ಆರ್. (2002). *ಮಹಿಳೆ, ಸಮಾಜ ಮತ್ತು ಸಂಸ್ಕೃತಿ.* ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ.
- ಪ್ರೀತಿ ಶುಭಚಂದ್ರ. (2002). *ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು.* ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ.
- ಸಾರಾ ಅಬೂಬಕ್ಕರ್. (2007). ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ. ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ.
- ಶಂಕರ್ ರಾವ್ ಚ.ನ. (2012). ಸಮಾಜಶಾಸ್ತ್ರ ದರ್ಶನ–ಭಾಗ–3, ಜೈ ಭಾರತ್ ಪ್ರಕಾಶನ.